ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು ಇದಕ್ಕಾಗಿ 3 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಅಲ್ಲದೆ ವಿಶ್ವಬ್ಯಾಂಕಿನ ನೆರವಿನಿಂದ ಸುಮಾರು 65 ಕೋಟಿ ರೂಪಾಯಿಗಳ ಅಂದಾಜಿನ 68 ಹೊಸ ಕೆರೆಗಳನ್ನು ಕಟ್ಟಲಾಗುವುದು.

(ಅ) ಚಿಕ್ಕ ನೀರಾವರಿ ಯೋಜನೆಯಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ನೀರಾವರಿಯಾಗುವ ಕ್ಷೇತ್ರವೆಷ್ಟು ?

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1-4-83ರ ಲಾಗಾಯ್ತು ನೀರಾವರಿಯಾಗುವ ಕ್ಷೇತ್ರ ಹೆಕ್ಟೇರಿನಲ್ಲಿ	1-4-83ರ ಲಾಗಾಯ್ತು ಕೆರೆ ಕಟ್ಟೆಗಳ ಸಂಖ್ಯೆ	1-4-83ರ ಲಾಗಾಯ್ತು ಪಿತ ನೀರಾವರಿ ಕಾಮಗಾರಿಗಳ ಸಂಖ್ಯೆ
1.	ಬೆಂಗಳೂರು	46614	1726	14
2.	ಬೆಳಗಾಂ	61928	862	20
3.	ಬಳ್ಳಾರಿ	25554	202	42
4.	ಬಿದರೆ	17168	166	11
5.	ಬಿಜಾಪುರ	53951	167	40
6.	ಚಿಕ್ಕಮಗಳೂರು	8811	2001	3
7.	ಚಿತ್ರದುರ್ಗ	37557	422	62
8.	ದಕ್ಷಿಣ ಕನ್ನಡ	17091	962	14
9.	ಧಾರವಾಡ	75710	2030	18
10.	ಗುಲ್ಬರ್ಗ	28416	615	22
11.	ಹಾಸನ	62564	3217	30
12.	ಕೊಡಗು	16173	854	8
13.	ಕೋಲಾರ	62684	2937	2
14.	ಮಂಡ್ಯ	78742	1198	18
15.	ಮೈಸೂರು	82082	979	49
16.	ರಾಯಚೂರು	22887	354	16
17.	ಶಿವಮೊಗ್ಗ	77210	4219	15
18.	ತುಮಕೂರು	70285	1794	15
19.	ಉತ್ತರ ಕನ್ನಡ	19705	1147	6
	ಒಟ್ಟು	895132	25806	405

ವಿಷಯ : ಹೇಮಾವತಿ ಪುನರ್ವಿಮರ್ಶಿಸಿದ ಅಂದಾಜು ಮತ್ತು ನೀರಾವರಿಯಾಗಲಿರುವ ಭೂಮಿಯ ವಿಸ್ತೀರ್ಣ.

ಪ್ರ. 95 (63) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ) :—ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹೇಮಾವತಿ ಅಣೆಕಟ್ಟನ್ನು ಕಟ್ಟಲು ಪ್ರಾರಂಭಿಸಿದಾಗ ಅದರ ಅಂದಾಜು ವೆಚ್ಚವೆಷ್ಟು ? ಈಗ ಪುನರ್ವಿಮರ್ಶಿತ ಅಂದಾಜು ವೆಚ್ಚವೆಷ್ಟು ? ಮತ್ತು ನೀರಾವರಿಯಾಗುವ ಭೂಮಿಯ ವಿಸ್ತೀರ್ಣವೆಷ್ಟು ;

(ಆ) ಹೇಮಾವತಿ ಅಣೆಕಟ್ಟು ಯೋಜನೆಯಿಂದ ಪ್ರಯೋಜನ ಪಡೆಯುವ ತಾಲ್ಲೂಕುಗಳು ಯಾವುವು ? ಮತ್ತು ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಭೂಮಿಗೆ ನೀರನ್ನು ಕೊಡಲು ಉದ್ದೇಶಿಸಲಾಗಿದೆ ;

(ಇ) ಹೇಮಾವತಿ ಅಣೆಕಟ್ಟಿನಿಂದ ಅರಸೀಕೆರೆ ತಾಲ್ಲೂಕಿಗೆ ನೀರು ಕೊಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಮೂಲ ಅಂದಾಜು 16·30 ಕೋಟಿ ರೂಪಾಯಿಗಳು.
ಪುನರ್ವಿಮರ್ಶಿಸಿದ ಅಂದಾಜು 295 ಕೋಟಿ ರೂಪಾಯಿಗಳು.
(1982–83 ನೆಯ ಸಾಲಿನ ದರಗಳ ಮಟ್ಟದಲ್ಲಿ)
ಈಗಿನ ಯೋಜನೆಯಂತೆ ನೀರಾವರಿ ವಿಸ್ತೀರ್ಣ—6.55.000 ಎಕರೆಗಳು.
(2,65,050 ಹೆಕ್ಟೇರುಗಳು)

(ಆ) ನೀರಾವರಿಯಾಗಲಿರುವ ತಾಲ್ಲೂಕುವಾರು ವಿಸ್ತೀರ್ಣ :—

ನಂ.	ತಾಲ್ಲೂಕಿನ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1.	ಹಾಸನ	2,000
2.	ಅರಕಲಗೂಡು	37,100
3.	ಹೊಳೆನರಸೀಪುರ	37,840
4.	ಚನ್ನರಾಯಪಟ್ಟಣ	30,540
5.	ತಿಪಟೂರು	25,310
6.	ಕುಣಿಗಲ್	47,170
7.	ತುರುವೇಕೆರೆ	1,08,160
8.	ಗುಬ್ಬಿ	1,07,360
9.	ತುಮಕೂರು	26,000
10.	ಕೃಷ್ಣರಾಜಪೇಟೆ	44,920
11.	ನಾಗಮಂಗಲ	1,01,000
12.	ಮಂಡ್ಯ	35,000
13.	ಪಾಂಡವಪುರ	47,000
14.	ಕೃಷ್ಣರಾಜನಗರ	5,600

(ಇ) ಇಲ್ಲ ; ಏಕೆಂದರೆ ಹೇಮಾವತಿ ಯೋಜನೆಯು ಕಾವೇರಿ ನದಿಪಾತ್ರದಲ್ಲಿದ್ದರೆ, ಅರಸೀಕೆರೆ ತಾಲ್ಲೂಕು ಕೃಷ್ಣಾನದಿ ಪಾತ್ರದಲ್ಲಿದೆ.

ವಿಷಯ : ಮೊಳಕಾಲ್ಮೂರು ತಾಲ್ಲೂಕು ಕೈಗಾರಿಕೆಯಿಂದ ಹಿಂದುಳಿದ ಪ್ರದೇಶ.

ಪ್ರ. ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆಳಿಗ ಉತ್ತರಿಸುವರೇ ?

(ಅ) ಮೊಳಕಾಲ್ಮೂರು ತಾಲ್ಲೂಕು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶವೆಂಬುದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಹಾಗಿಲ್ಲದಿದ್ದಲ್ಲಿ ಮೊಳಕಾಲ್ಮೂರು ತಾಲ್ಲೂಕನ್ನು ಕೈಗಾರಿಕೆಗಳಿಂದ ಹಿಂದುಳಿದ ತಾಲ್ಲೂಕೆಂದು ಘೋಷಿಸುವ ಸಲಹೆ ಏನಾದರೂ ಸರಕಾರದವರ ಮುಂದೆ ಇದೆಯೆ ;

(ಇ) ಹಾಗಿಲ್ಲದಿದ್ದಲ್ಲಿ ಅದನ್ನು ಕೈಗಾರಿಕೆಗಳಿಂದ ಹಿಂದುಳಿದ ಪ್ರದೇಶವೆಂದು ಸರಕಾರದವರು ಘೋಷಿಸುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ಬಂದಿದೆ.